‘ಹಾಟ್‌ಮಿಟ್ಲೆ ಟೂ ಮಿಟ್ಲೆ ಹಾಟ್ ಹಾಟ್ ಹಾಟ್’ ಎಂದು ಖುಷಿಯಾಗಿದ್ದಾಗ ಜೋರಾಗಿ ನಗುತ್ತಿದ್ದ.

‘ಕಾಸ್ಟ್ ಮಿಟ್ಲೆ ವೈಟ್ ಮಿಟ್ಲೆ ಕಾಸ್ಟ್ ಕಾಸ್ಟ್ ಕಾಸ್ಟ್’ ಎಂದು ದುಃಖದಲ್ಲಿದ್ದಾಗ ಜೋರಾಗಿ ಅಳುತ್ತಿದ್ದ.

ದಿನಕ್ಕೆ ಒಂದೆರಡು ಬಾರಿ ಮಾತ್ರ ಇಂಥ ಕೇಕೆ, ಗೋಳು. ಉಳಿದ ಸಮಯದಲ್ಲಿ ಹೆಚ್ಚಾಗಿ ಸಣ್ಣಗೆ ನಗುತ್ತಾ, ಅಪರೂಪಕ್ಕೆ ಕಣ್ಣೀರು ಸುರಿಸುತ್ತ ‘ಮನ ಮನ’ ಅನ್ನುತ್ತಿದ್ದ. ಇದ್ಯಾರಿಗೂ ಅರ್ಥವಾಗುತ್ತಿರಲಿಲ್ಲ. ದಿನಕ್ಕೊಂದೆರಡು ಬಾರಿ ಮಾತ್ರ ಮೇಲಿನ ಉದ್ಗಾರಗಳು ಕೇಳಿ ಬರುತ್ತಿದ್ದವು.

ಸುಮಾರು ಒಂದೂವರೆ ವರ್ಷದ ಹಿಂದೆ ಇದ್ದಕ್ಕಿದ್ದಂತೆ ಒಂದು ದಿನ ‘ಹಾಟ್‌ಮಿಟ್ಲೆ ಟೂ ಮಿಟ್ಲೆ ಹಾಟ್ ಹಾಟ್ ಹಾಟ್’ ಎಂದು ಜೋರಾಗಿ ಹೇಳುತ್ತಾ ಕೇಕೆ ಹಾಕಿದಾಗ ಈ ಅರ್ಥವಾಗದ ಶಬ್ದಗಳನ್ನು ಕೇಳಿ ಅಚ್ಚರಿಯಿಂದ ನೋಡಿದ್ದ ಆ ವ್ಯಕ್ತಿಯ ಹೆಸರು ಇಂದಿಗೂ ಗೊತ್ತಾಗದಿದ್ದರೂ ಬಿಳಲೂರಿನ ಜನರಿಗೆ ‘ಹಾಟ್‌ಮಿಟ್ಲೆ’ಯಾಗಿಯೇ ಪರಿಚಯವಾಗಿದ್ದ. ಅದು ಬಿಳಲೂರಿನಲ್ಲಿ ಹಾಟ್‌ಮಿಟ್ಲೆಯಾಗಿಯೂ ಅಲ್ಲಿಂದ ದೂರಕ್ಕೆ ಸರಿದಂತೆ ಹಾಟ್‌ಮಿಟ್ಲೆ ಅಪಭ್ರಂಶಗೊಂಡು ‘ವಾಟ್‌ಮಿಟ್ಲೆ’ಯಾಗಿಯೂ ಪರಿವರ್ತನೆಗೊಂಡಿತ್ತು. ಹಾಗಾಗಿ ಒಂದಷ್ಟು ಜನ ಹಾಟ್‌ಮಿಟ್ಲೆ ಎಂದು ಕರೆಯುತ್ತಿದ್ದರೆ ಹೆಚ್ಚಿನವರು ‘ವಾಟ್‌ಮಿಟ್ಲೆ’ ಎಂದೇ ಕರೆಯುತ್ತಿದ್ದರು.

ಸುಮಾರು ಐದೂವರೆ ಐಡಿ ಎತ್ತರದ ಗಟ್ಟಿಯಾಳು. ದೊಗಲೆ ಚಡ್ಡಿ ಮತ್ತು ಅಂಗಿ ನಿತ್ಯದ ಬಟ್ಟೆ. ಬಿಳಲೂರಿನಲ್ಲಿ ಚಳಿಗಾಲ ಅನ್ನುವುದು ಹೆಸರಿಗಷ್ಟೆ ಇರುವುದು. ಮಳೆಗಾಲ ಮತ್ತು

